**ಡಾ. ಮಹೇಂದ್ರ ಎಸ್. ಕಂಠಿ**
Ph.D [U of K-USA]

**ಕಿತ್ತೂರ ರಾಣಿ ಚನ್ನಮ್ಮ ಮೆಮೋರಿಯಲ್ ಕಮೀಟಿ**

**ಕಿತ್ತೂರ ರಾಣಿ ಚನ್ನಮ್ಮ ಬಾಲಕಿಯರ ವಸತಿ ಸೈನಿಕ ಶಾಲೆ,**
**ಕಿತ್ತೂರ-591 115 ಕರ್ನಾಟಕ, [ಭಾರತ]**
ಕಛೇರಿ : ಕಿತ್ತೂರ - 591 115, ಜಿಲ್ಲಾ : ಬೆಳಗಾವಿ
ರಾಜ್ಯ : ಕರ್ನಾಟಕ, ಭಾರತ ದೂರವಾಣಿ : [08288] 234630 / 234609

| | |
|---|---|
| ಚೇರಮನ್‌ರು | : ಅಧ್ಯಕ್ಷೀಯ ಮಂಡಳಿ, ಕೆ.ಆರ್.ಸಿ.ಎಮ್.ಸಿ. ಕಿತ್ತೂರ |
| ಮಾಜಿ ಸದಸ್ಯರು | : ಮೂರನೇ ಕರ್ನಾಟಕ ರಾಜ್ಯ ಹಣಕಾಸು ಆಯೋಗ, ಕರ್ನಾಟಕ ಸರಕಾರ |
| ಮಾಜಿ ಸದಸ್ಯರು | : ಮೂರನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಸಮಿತಿ ಕಾರ್ಯಪಡೆ, ಕರ್ನಾಟಕ ಸರ್ಕಾರ |
| ಮಾಜಿ ಅಧ್ಯಕ್ಷರು | : ಗ್ರಾಮ ಪಂಚಾಯತ್ ಸೀಮಾ ನಿರ್ಣಯ ಸಮಿತಿ, ಕರ್ನಾಟಕ ಸರ್ಕಾರ |
| ಮಾಜಿ ಉನ್ನತ ಸಲಹೆಗಾರರು | : ಯುನೈಟೆಡ್ ನೇಶನ್ಸ್ ಇಂಡಸ್ಟ್ರಿಯಲ್ ಡೆವೆಲೆಪ್‌ಮೆಂಟ್ ಸಂಸ್ಥೆ [UNIDO] ವಿಯೆನ್ನಾ, ಆಸ್ಟ್ರಿಯಾ |
| ಸದಸ್ಯರು | : ಅಮೇರಿಕಾ ಸಂಯುಕ್ತ ಸಂಸ್ಥಾನದ ವಿಶ್ವಸಂಸ್ಥೆಯ ಒಕ್ಕೂಟ [ಯು.ಎನ್.ಎ.], ನ್ಯೂಯಾರ್ಕ, ಯು.ಎಸ್.ಎ. |
| ಕೆಲಾಗ್ ಸನ್ಮಾನಿತರು | : ಕೆಲಾಗ್ ಫೌಂಡೇಶನ್, ಯು.ಎಸ್.ಎ. |
| ಪ್ರಾಧ್ಯಾಪಕರು ಎಮಿರೇಟಸ್ | : ಅಂತರಾಷ್ಟ್ರೀಯ ಅರ್ಥಶಾಸ್ತ್ರ, ಸೆಗಿನಾವ್ಹ್ಯಾಲಿ ರಾಜ್ಯ ವಿಶ್ವವಿದ್ಯಾಲಯ ವಿಶ್ವವಿದ್ಯಾಲಯ ಕೇಂದ್ರ, ಮಿಚಿಗನ್-48710, ಯು.ಎಸ್.ಎ. ಮೊ : ಯು.ಎಸ್.ಎ.: [989] 493 -9194 |


**ಜುಲೈ 15 [ಬುಧವಾರ],2020**

ಸಹೃದಯಿ ಪಾಲಕವರ್ಗದವರಿಗೆ ಅನಂತ ನಮಸ್ಕಾರಗಳು,

ತಮಗೆಲ್ಲಾ ತಿಳಿದಿರುವಂತೆ ಕೋವಿಡ್-19 ವಿಶ್ವಾದ್ಯಂತ ಎಲ್ಲ ಚಟುವಟಿಕೆಗಳಿಗೆ ತುಂಬಾನೇ ಕೋಲಾಹಲ, ಅಡ್ಡಿ-ಆತಂಕಗಳನ್ನು ತಂದೊಡ್ಡಿದೆ. ಇಂತಹ ಒಂದು ಸನ್ನಿವೇಶದಲ್ಲಿ ನಮ್ಮ ಶಾಲೆಯ ಕಲಾಪಗಳನ್ನು ಸಾಗಿಸಿಕೊಂಡು ಹೋಗುವಲ್ಲಿ ತೊಂದರೆಗಳು ಬಂದಿರುವುದು ಸಹಜ. ಈ ನಿಟ್ಟಿನಲ್ಲಿ ಶಾಲೆಯ ಪುನರ್ ಆರಂಭ ಒಂದು ಪ್ರಮುಖವಾದ ಹೆಜ್ಜೆ ಎಂಬುದು ನಿರ್ವಿವಾದಿತ ಅಂಶ. ವ್ಯಾಸಂಗಿಕ ಪ್ರಗತಿಯ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಸರಿದೂಗಿಸಲು ಆನ್-ಲೈನ್ ಬೋಧನೆ ಪಠ್ಯವನ್ನು ಈಗಾಗಲೇ ಆರಂಭಿಸಲಾಗಿದೆ, ಹಾಗೆಯೇ ಇದಕ್ಕೆ ವಿದ್ಯಾರ್ಥಿ ವಲಯದಿಂದ ಸೂಕ್ತ ಪ್ರತಿಕ್ರಿಯೆ ದೊರೆತಿರುವುದು ಒಂದು ಒಳ್ಳೆಯ ಬೆಳವಣಿಗೆ ಎಂದು ನಾನು ಭಾವಿಸುವೆ. ಆದರೆ ಆನ್-ಲೈನ್ ಬೋಧನೆ ಗ್ರಾಮೀಣ ಮಕ್ಕಳಿಗೆ ತಾಂತ್ರಿಕ ಕಾರಣಗಳಿಂದಾಗಿ ತಲುಪದೇ ಇರುವುದು ಕೂಡ ಒಪ್ಪಿಕೊಳ್ಳಲೇಬೇಕಾದದ್ದೇ! ಈ ಆನ್-ಲೈನ್ ಬೋಧನೆಯು ಕೇವಲ ತಾತ್ಕಾಲಿಕ ವ್ಯವಸ್ಥೆ ಎಂದು ಈ ಸಂದರ್ಭದಲ್ಲಿ ತಮಗೆಲ್ಲ ಹೇಳಲು ಬಯಸುವೆನು. ಈ ವಿಷಮ ಸ್ಥಿತಿಯು ಹತೋಟಿಗೆ ಬಂದ ತಕ್ಷಣವೇ ಘನ ಸರ್ಕಾರದ ಆದೇಶಗಳನ್ನು ಗಣನೆಗೆ ತೆಗೆದುಕೊಂಡು ಶಾಲೆಯನ್ನು ಪುನರ್ ಆರಂಭಿಸಲಾಗುವದು.

ಶಾಲೆಯ ಕುರಿತು ತಮ್ಮೆಲ್ಲರ ಅಭಿಮಾನ, ಕಾಳಜಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವೆನು. ತಮ್ಮೆಲ್ಲರ ಆಶೋತ್ತರಗಳಿಗೆ ಪೂರಕವಾಗಿ ವಿಶೇಷವಾಗಿ ಹೊಸ ಕಲ್ಪನೆಗಳಾದ ಸೆನಿಟೈಸೇಸನ್, ಮುಖಕವಚ ಧರಿಸುವಿಕೆ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆಗೆ ಒತ್ತು ಕೊಡುವುದನ್ನು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಸರ್ವ ಕ್ರಮ ಕೈಗೊಳ್ಳಲಾಗುವದು.

ಈಗಾಗಲೇ ಎರಡು ವಿನೂತನ ಮಾದರಿಯ ವಸತಿ ನಿಲಯಗಳ ಕೆಲಸವು ಪ್ರಗತಿಯಲ್ಲಿದ್ದು ಹದಿನಾಲ್ಕು ತಿಂಗಳ ಕಾಲಾವಧಿಯಲ್ಲಿ ಇಪ್ಪತ್ತು ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಎರಡು ವಿನೂತನ, ಸುಸಜ್ಜಿತ ವಿದ್ಯಾರ್ಥಿನಿ ವಸತಿ ನಿಲಯಗಳು ಶಾಲೆಯ ಆವರಣವನ್ನು ಇನ್ನಷ್ಟು ಅಂದಗೊಳಿಸಲಿವೆ ಎಂಬುದನ್ನು ಕೂಡ ತಮ್ಮೆಲ್ಲರ ಗಮನಕ್ಕೆ ತರಲು ಬಯಸುವೆನು.

ಈ ಸಂದರ್ಭದಲ್ಲಿ ಗಗನಕ್ಕೇರುತ್ತಿರುವ ಶಾಲಾ ನಿರ್ವಹಣೆ ವೆಚ್ಚಗಳನ್ನು ಸರಿದೂಗಿಸಲು ತಾವೆಲ್ಲರೂ ಮಕ್ಕಳ ಶಾಲಾ ಶುಲ್ಕವನ್ನು ಸಮಯೋಚಿತವಾಗಿ ಕಟ್ಟುವ ಮೂಲಕ ಶಾಲೆಯ ಪ್ರಗತಿಗೆ ಮುಕ್ತಹಸ್ತವನ್ನು ಚಾಚಲು ತಮ್ಮೆಲ್ಲರಲ್ಲಿ ಕಳಕಳಿಯ ಮನವಿ.

ತಮ್ಮ ವಿಶ್ವಾಸಿ,

ಮ.ಎಸ್.ಕಂಠಿ

ಡಾ. ಮಹೇಂದ್ರ ಎಸ್. ಕಂಠಿ, ಪಿಎಚ್‌ಡಿ [ಯುಕೆ/ಯುಎಸ್‌ಎ]
ಅಧ್ಯಕ್ಷರು